ಸುಂದರ ಬಾಳಿಗೆ ಸುಮಧುರ ದ್ವೈ ಮಾಸಿಕ

# ಪ್ರಿಯಾಂಕ ಪತ್ರಿಕೆ

ಅಕ್ಟೋಬರ್-ನವೆಂಬರ್ 2022

ಬೆಲೆ ₹ 40



ಸ್ತನ ಕ್ಯಾನ್ಸರ್ ಇರಲಿ ಮುಂಜಾಗ್ರತೆ

ಮಹಾತ್ಮಾಗಾಂಧಿ ಕುಟುಂಬ

ಲಿಂಗ ಸಮಾನತೆ ನಾಲ್ಕು ದೇಶಗಳು

ತಾಯಂದಿರಿಗೆ ಉದ್ಯೋಗ ತೋರಿಸುತ್ತಾರೆ

## ಮೈಸೂರು ದಸರಾ

ಅಂದು-ಇಂದು

## ಅವಧಿಗೆ ಮುನ್ನ ಮಗು ಜನನ

## ಬೆಳಕಿನ ಸಂಕೇತವೇ ದೀಪಾವಳಿ

# ಬೌದ್ಧಿಕ ಮತ್ತು ದೈಹಿಕ ಬೆಳವಣಿಗೆ ಕುಂಠಿತ ಮಗು
# ಕಥಕ್ ನೃತ್ಯವನ್ನು ಕಲಿಯಿತು

■ ಡಾ. ಬಿ.ಟಿ.ರುದ್ರೇಶ್

ಅವರಿಗೆ ಅದು ಪವಾಡ ಅನ್ನಿಸಿತ್ತು. ಆದರೆ ನನಗೆ ಕರ್ತವ್ಯದಲ್ಲಿ ದೊರೆತ ಮತ್ತೊಂದು ಅಪೂರ್ವ ಯಶಸ್ಸಿನ ಪ್ರಕರಣವಾಗಿತ್ತು.

ಮಗುವಾಗಲಿಲ್ಲ ಎನ್ನುವ ಅದೆಷ್ಟೋ ದಂಪತಿಗಳ ಕೊರಗು ಕರಗುವಂತೆ ಮಾಡಿರುವ ದಾಖಲೆ ನನ್ನ ಪಾಲಿಗೆ ಇರಬಹುದು. ಆದರೆ ಯಾವುದೇ ಸಮಸ್ಯೆ ಇಲ್ಲದೆ ಸಹಜವಾಗಿ ಮಗು

ಮಗು ಬದುಕುವುದೇ ಇಲ್ಲ ಎನ್ನುವ ಸ್ಥಿತಿಯಿಂದ ಕಾಲೇಜು ಓದಿನವರೆಗೆ ತಂದಿದ್ದ ನನಗೆ ಬಾಲಕಿಯ ವಯೋಸಹಜ ಆಕರ್ಷಣೆಗಳು, ಆಸೆಗಳು ತಪ್ಪಾಗಿ ಕಾಣಲಿಲ್ಲ. ಮಾನಸಿಕವಾಗಿ ಆಕೆಯನ್ನು ಬದಲಾಯಿಸುವುದು ನನ್ನ ಜವಾಬ್ದಾರಿಯಾಗಿತ್ತು. ಜಗತ್ತಿನಲ್ಲಿ ಇರುವ ಎಲ್ಲರೂ ಒಂದೇ ತರಹ ಇರುವುದು ಸಾಧ್ಯವಿಲ್ಲ. ಇದಕ್ಕಾಗಿ ಕೊರಗಬಾರದು, ಜೀವನ ಎಂಬ ಅಪೂರ್ವ ಅವಕಾಶವನ್ನು ಸದುಪಯೋಗ ಪಡಿಸಿಕೊಂಡು ಮುನ್ನಡೆಯಬೇಕೆಂದು ನಾನು ಹೇಳಿದ ಮಾತು ಆಕೆಯಲ್ಲಿ ಹೊಸ ಭರವಸೆ ಮೂಡಿದಂತೆ ಕಾಣಿಸಿತು. ಬದುಕನ್ನು ಸಾರ್ಥಕಗೊಳಿಸುವ ದಿಕ್ಕಿನಲ್ಲಿ ಅವಳು ಆಲೋಚಿಸ ತೊಡಗಿದಳು. ಆಕೆ ಈಗ ನೆಮ್ಮದಿಯಿಂದಿದ್ದಾಳೆ. ಋಷಿಯ ಬದುಕು ಅವಳದು.



ಪಡೆದವರ ನಾನಾ ರೀತಿಯ ಗೋಳುಗಳನ್ನೂ ನಾನು ನೋಡಿದ್ದೇನೆ. ಹುಟ್ಟಿದ ಮಗು ಆರೋಗ್ಯವಾಗಿರಬೇಕು ಎಂದು ಎಲ್ಲ ಪೋಷಕರೂ ಬಯಸುತ್ತಾರೆ. ಆದರೆ ಎಲ್ಲ ಸಂದರ್ಭಗಳಲ್ಲೂ ಬಯಕೆ ಕಾರ್ಯರೂಪಕ್ಕೆ ಬರಬೇಕಲ್ಲಾ?

ಅದು 1999ರ ಜೂನ್ ತಿಂಗಳು. ಆ ಯುವ ದಂಪತಿ ಮಧ್ಯಪ್ರದೇಶದಿಂದ ತಮ್ಮ ಮಗುವೊಂದನ್ನು ಕರೆತಂದಿದ್ದರು. ಒಂದು ವರ್ಷ ಐದು ತಿಂಗಳ ಹೆಣ್ಣು ಮಗು ಅದು. ನನ್ನ ಟೇಬಲ್ ಮೇಲಿಟ್ಟಾಗ, ಕಣ್ಣುಗಳನ್ನು ಅಲ್ಲಾಡಿಸುತ್ತಿರುವುದನ್ನು ಬಿಟ್ಟರೆ ಇನ್ನಾವುದೇ ಚಲನೆ ಕಾಣಿಸುತ್ತಿರಲಿಲ್ಲ. ಅವರ ರಾಜ್ಯದ ವೈದ್ಯರು ಮಗುವನ್ನು ಬೌದ್ಧಿಕ ಹಾಗೂ ದೈಹಿಕ ಬೆಳವಣಿಗೆ ಕುಂಠಿತ ಮಗು ಎಂದು ಗುರುತಿಸಿ, ಇನ್ನೇನು ಮಾಡಲಾಗುವುದಿಲ್ಲ ಎಂದು ಕೈಚೆಲ್ಲಿದ್ದರಿಂದ ನನ್ನ ಬಳಿ ಕರೆತಂದಿದ್ದರು. ಆ ತಾಯಿ ಐವಿಎಫ್ (ಪ್ರನಾಳ ಶಿಶು) ನಿಂದ ಗರ್ಭ ಧರಿಸಿದ್ದಳು. ಕೊನೆಗೂ ತನಗೆ ಮಗುವಾಗುತ್ತಿದೆ ಎನ್ನುವ ಸಂತೋಷ ಹೆಚ್ಚು ಸಮಯ ಉಳಿಯಲಿಲ್ಲ.

ಮಗು ಹುಟ್ಟಿದ 12 ಗಂಟೆಯ ಬಳಿಕ ರಕ್ತ ವಾಂತಿ ಮಾಡಿಕೊಳ್ಳುತ್ತಿತ್ತು, ಈ ಸಮಸ್ಯೆ ಮಾರಣಾಂತಿಕವಾಗಬಹುದೆಂದು 40 ಮಿಲಿ ಲೀಟರ್‌ನಷ್ಟು ರಕ್ತ ಕೊಟ್ಟಿದ್ದರು. ಸಂಪೂರ್ಣವಾಗಿ ದೈಹಿಕ ಬೆಳವಣಿಗೆ ಕುಂಠಿತ ಹಾಗೂ ಬುದ್ಧಿಮಾಂದ್ಯತೆ ಎಂದು ವೈದ್ಯರು ಗುರುತಿಸಿದ್ದರು. ಹಾಗೆ ನೋಡಿದರೆ ಈ ಮಗುವಿನ ತೂಕ ಹೆಚ್ಚಿಗೆ ಇರಲಿಲ್ಲ. ಕೇವಲ 1.6 ಕೆ.ಜಿ ಇತ್ತು. ಇದಕ್ಕೆ ಕಾರಣ ಮಗು ಗರ್ಭದಲ್ಲಿದ್ದ ಮೂರನೇ ತಿಂಗಳಲ್ಲಿ ಬೆಳವಣಿಗೆ ಕುಂಠಿತವಾದದ್ದು. ನನ್ನ ಬಳಿ ಕರೆತಂದಾಗ, ಯಾವುದೇ ದೃಷ್ಟಿಯಿಂದ ಒಂದೂವರೆ ವರ್ಷದ ಮಗುವಿಗಿರಬೇಕಾದ ದೈಹಿಕ ಹಾಗೂ ಮಾನಸಿಕ ಬೆಳವಣಿಗೆ ಇರಲಿಲ್ಲ. ನೆತ್ತಿ ಕೂಡಿರಲಿಲ್ಲ. ನಿಮಗೆ ಆಶ್ಚರ್ಯವಾಗಬಹುದು. ನೆತ್ತಿಯ ಮೂಲಕವೇ ನಾಡಿಮಿಡಿತವನ್ನು ನೋಡಬಹುದಾಗಿತ್ತು. ಪಾರಿವಾಳದಂತಹ ಮೃದುವಾದ ಎದೆಯಿತ್ತು. ಅದು ನಡೆಯುವುದಾಗಲೀ, ನಿಲ್ಲುವುದಾಗಲಿ, ತೆವಳುವುದಾಗಲೀ ಮಾಡುತ್ತಿರಲಿಲ್ಲ. ಪ್ರತಿ ಮೂರು ತಿಂಗಳಿಗೊಮ್ಮೆ ಹೆಡ್ ಸ್ಕ್ಯಾನ್ ಮಾಡಿಸುತ್ತಿದ್ದರು. ಎಡಗಣ್ಣಿನಿಂದ ನೀರು ಸೋರುತ್ತಿತ್ತು, ಬದುಕುಳಿಯಲು ಆ ಮಗು ಹೆಣಗಾಡುತ್ತಿತ್ತು, ಸತತವಾಗಿ ಅಳುತ್ತಿತ್ತು. ವೈದ್ಯನಾದ ನನಗೇ ಆ ಸಂಕಟ ತಡೆಯಲಾಗಲಿಲ್ಲ ಎಂದರೆ ಅದರ ಅಪ್ಪ ಅಮ್ಮನ ನೋವು ಇನ್ನಾವ ಪ್ರಮಾಣದಲ್ಲಿದ್ದಿರಬಹುದು?

ಇಂಥ ಸ್ಥಿತಿಯಲ್ಲಿ ಚಿಕಿತ್ಸೆ ಶುರು ಮಾಡಿದೆ. ಆರು ತಿಂಗಳಲ್ಲಿ ಮಗು ನಗಲಾರಂಭಿಸಿತು. ಇನ್ನಾರು ತಿಂಗಳಲ್ಲಿ ಮಗು ಇತರರ ಸಹಾಯದೊಂದಿಗೆ ನಡೆಯಲು ಆರಂಭಿಸಿತು. ತೂಕ 7 ಕೆ.ಜಿ.ಗೆ ಬಂತು. ಹೀಗೆ 2 ವರ್ಷದ ಔಷಧಿಯ ನಂತರ ಮಗು ಮಾತನಾಡಲಾರಂಭಿಸಿತು. 14 ಅಕ್ಷರಗಳನ್ನು ಬರೆಯುವುದು ಅದಕ್ಕೆ ಸಾಧ್ಯವಾಯಿತು. ಆರು ತಿಂಗಳಿಗೊಮ್ಮೆ ಮಧ್ಯಪ್ರದೇಶದಿಂದ ಮಗುವನ್ನು ಕರೆತರುವುದೇ ತಾಯಿಗೆ ಬಹು ಪ್ರಯಾಸದ ಕೆಲಸವಾಗಿತ್ತು. ಮಗುವನ್ನು ಉಳಿಸಿ ಬೆಳೆಸುವ ಆಕೆಯ ಛಲದ ಎದುರು ನೂರಾರು ಕಿಲೋಮೀಟರ್‌ಗಳ ಪ್ರಯಾಣ ಏನೇನೂ ಆಗಿರಲಿಲ್ಲ. ಎಲ್ಲಿಯ ಮಧ್ಯಪ್ರದೇಶ, ಎಲ್ಲಿಯ ಕರ್ನಾಟಕ? ಹೀಗೆ ಆರು ವರ್ಷದವರೆಗೂ ಔಷಧಿಯನ್ನು ಮುಂದುವರಿಸಿದೆ. ಸಹಜ ಬೆಳವಣಿಗೆ ಕಂಡ ಮಗುವಿಗೆ ಹಲ್ಲುಗಳು ಬರಲಾರಂಭಿಸಿದವು. 10 ವರ್ಷದ ಹೊತ್ತಿಗೆ ಮಗು, ಕುಳ್ಳಗಿದ್ದಿದ್ದನ್ನು ಬಿಟ್ಟರೆ ಸಾಮಾನ್ಯ ಬುದ್ಧಿಜ್ಞಾನವಂತೂ ಇದ್ದೇ ಇತ್ತು. ಶಾಲೆಗೆ ಹೋಗಲಾರಂಭಿಸಿದ ಮಗು ಬೌದ್ಧಿಕವಾಗಿ ವಿಕಸನವಾಗತೊಡಗಿತು. ಕಥಕ್ ನೃತ್ಯ ಕಲಿಯಲು ಆರಂಭಿಸಿತು.

2011ರ ಸುಮಾರಿಗೆ ಆಕೆ [ಆ ಮಗು] ಋತುಮತಿಯಾದಳು. ವಯೋಸಹಜ ವಾದ ನಡವಳಿಕೆ ಶುರುವಾಯಿತು. ಕನ್ನಡಿ ಮುಂದೆ ಹೆಚ್ಚು ಹೊತ್ತುಕಳೆಯುತ್ತಿದ್ದಳು. ಕುಳ್ಳಳಾಗಿದ್ದರಿಂದ ತಾನು ಇತರರಂತಿಲ್ಲ ಎಂಬ ನೋವು ಕಾಡತೊಡಗಿತು. 2015 ರಲ್ಲಿ ಅವಳನ್ನು ತಾಯಿ ಕರೆದುಕೊಂಡು ಬಂದಾಗ, ಆಕೆ ಐ.ಸಿ.ಎಸ್.ಸಿ. 10ನೇ ತರಗತಿಯಲ್ಲಿ ಶೇ.76 ಅಂಕಗಳನ್ನು ಪಡೆದಿದ್ದಳು. ಕಾಲೇಜಿಗೂ ಅವಳು ಸೇರಿದಳು. ತನಗಿಲ್ಲದ ಸೌಂದರ್ಯದಿಂದಾಗಿ ಬಾಯ್ ಫ್ರೆಂಡ್ ಮಾಡಿಕೊಳ್ಳಲಾಗಲಿಲ್ಲ ಎಂದು ಚಿಂತಿಸತೊಡಗಿದಳು. ವಯೋಸಹಜವಾಗಿ ತನ್ನ ಸಹಪಾಠಿಗಳ ಅನುಭವ ತನಗೆ ದೊರೆಯುತ್ತಿಲ್ಲ ಖಿನ್ನತೆ ಅವಳನ್ನು ಬಹುವಾಗಿ ಕಾಡಿತ್ತು. ಅದು ಅವಳ ತಾಯಿ ಹಾಗೂ ನನ್ನನ್ನು ಕಾಡುತ್ತಿರುವ ದೊಡ್ಡ ಸಮಸ್ಯೆ ಆಗಿತ್ತು.

ಅಷ್ಟಕ್ಕೂ ಸುಮ್ಮನಾಗದೇ ಅವಳನ್ನು ಖಿನ್ನತೆಯಿಂದ ಹೊರತರುವ ಬಗ್ಗೆ ನನ್ನ ಚಿಂತನೆ ಆರಂಭವಾಗಿತ್ತು. ಮಗು ಬದುಕುವುದೇ ಇಲ್ಲ ಎನ್ನುವ ಸ್ಥಿತಿಯಿಂದ ಕಾಲೇಜು ಓದಿನವರೆಗೆ ತಂದಿದ್ದ ನನಗೆ ಬಾಲಕಿಯ ವಯೋ ಸಹಜ ಆಕರ್ಷಣೆಗಳು, ಆಸೆಗಳು ತಪ್ಪಾಗಿ ಕಾಣಲಿಲ್ಲ. ಮಾನಸಿಕವಾಗಿ ಆಕೆಯನ್ನು ಬದಲಾಯಿಸುವುದು ನನ್ನ ಜವಾಬ್ದಾರಿಯಾಗಿತ್ತು. ಜಗತ್ತಿನಲ್ಲಿ ಇರುವ ಎಲ್ಲರೂ ಒಂದೇ ತರಹ ಇರುವುದು ಸಾಧ್ಯವಿಲ್ಲ. ಇದಕ್ಕಾಗಿ ಕೊರಗಬಾರದು. ಜೀವನ ಎಂಬ ಅಪೂರ್ವ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಮುನ್ನಡೆಯ ಬೇಕೆಂದು ನಾನು ಹೇಳಿದ ಮಾತು ಆಕೆಯಲ್ಲಿ ಹೊಸ ಭರವಸೆ ಮೂಡಿದಂತೆ ಕಾಣಿಸಿತು. ಬದುಕನ್ನು ಸಾರ್ಥಕಗೊಳಿಸುವ ದಿಕ್ಕಿನಲ್ಲಿ ಅವಳು ಆಲೋಚಿಸತೊಡಗಿದಳು. ಆಕೆ ಈಗ ನೆಮ್ಮದಿಯಿಂದಿದ್ದಾಳೆ. ಖುಷಿಯ ಬದುಕು ಅವಳದು.

ತಮ್ಮೊಂದಿಗೆ ಈ ಪ್ರಕರಣವನ್ನು ಹಂಚಿಕೊಳ್ಳುವ ಉದ್ದೇಶ. 1999ರಲ್ಲಿ ತೀವ್ರ ಬುದ್ಧಿಮಾಂದ್ಯತೆಯಿಂದ ನರಳುತ್ತಿದ್ದ, ಬೆಳವಣಿಗೆ ಕುಂಠಿತವಾಗಿದ್ದ, ಇನ್ನೇನೂ ಮಾಡಲು ಸಾಧ್ಯವಿಲ್ಲವೆಂದು ಕೈಚೆಲ್ಲಿದ್ದ ಪ್ರಕರಣ ತಾಯಿಯ ಮನೋಸ್ಥೈರ್ಯ, ಆಕೆ ನನ್ನಲ್ಲಿ ಹಾಗೂ ನಾನು ಹೋಮಿಯೋಪತಿಯಲ್ಲಿ ಇಟ್ಟಿದ್ದ ಬಲವಾದ ನಂಬಿಕೆ ಇಂದು ಅವಳನ್ನು ಕಾಲೇಜಿಗೆ ಹೋಗುವಂತೆ ಮಾಡಿತ್ತು. ನನಗಂತೂ ಕೋಟಿ ಕೊಟ್ಟರೂ ಸಿಗದ ತೃಪ್ತಿ, ಈ ಪ್ರಕರಣದಲ್ಲಿ ಸಿಕ್ಕಿತ್ತು. ತಾಯಿ ಮೊದಲ ದಿನ ಬಂದಾಗ ತೆಗೆದ ಫೋಟೋ ಹಾಗೂ ಹಂತ ಹಂತವಾಗಿ ಕಳುಹಿಸಿದ ಫೋಟೋಗಳು ಹಾಗೂ ಕಥಕ್ ಮಾಡಲು ಆಕೆ ತಯಾರಾಗಿ ನಿಂತ ಫೋಟೋ ನಿಜಕ್ಕೂ ಯಾರಿಗೂ ಕಟ್ಟುಕತೆಯಂತೆ ಕಾಣಿಸಿದರೆ ಆಶ್ಚರ್ಯವಿಲ್ಲ. ■